ಜನವರಿ 8, 2004

**ಕರೆನ್ಸಿ ನೋಟು ಪ್ಯಾಕೆಟುಗಳಿಗೆ ಪಿನ್ನುಗಳನ್ನು ಹಾಕಿದರೆ, ಬ್ಯಾಂಕ್‌ಗಳನ್ನು ದಂಡನೆಗೆ ಗುರಿ ಮಾಡಬಹುದು: ಆರ್‌ಬಿಐ**

ಭಾರತೀಯ ರಿಸರ್ವ್ ಬ್ಯಾಂಕು ಕರೆನ್ಸಿ ನೋಟುಗಳ ಪ್ಯಾಕೆಟುಗಳಿಗೆ ಪಿನ್ನುಮಾಡುವುದನ್ನು ಸಂಪೂರ್ಣವಾಗಿ ನಿಷೇಧಿಸಿದೆ ಮತ್ತು ಯಾವುದೇ ಬ್ಯಾಂಕು ಅಥವಾ ಬ್ಯಾಂಕಿನ ಶಾಖೆಯು ಪಿನ್ನು ಮಾಡಿದ ನೋಟುಗಳ ಪ್ಯಾಕೆಟುಗಳನ್ನು ನೀಡತಕ್ಕುದಲ್ಲ ಅಥವಾ ಸ್ವೀಕರಿಸತಕ್ಕುದಲ್ಲ ಎಂದು ಒತ್ತಿ ಹೇಳಿದೆ. ಯಾವುದೇ ಬ್ಯಾಂಕು ಅಥವಾ ಬ್ಯಾಂಕ್ ಶಾಖೆಯು ಪಿನ್ನುಗಳನ್ನು ಹಾಕಿದ ಸ್ಥಿತಿಯಲ್ಲಿ ನೋಟು ಪ್ಯಾಕೆಟುಗಳನ್ನು ನೀಡಿರುವುದು ಅಥವಾ ಸ್ವೀಕರಿಸಿರುವುದು ಕಂಡು ಬಂದರೆ, ಈಗಿನ ಬ್ಯಾಂಕಿಂಗ್ ನಿಯಂತ್ರಣ ಕಾಯಿದೆ, 1949ರ ಉಪಬಂಧಗಳ ಮೇರೆಗೆ, ಅವುಗಳು ದಂಡನೆಗೆ ಗುರಿಯಾಗುತ್ತವೆ.

ರಿಸರ್ವ್ ಬ್ಯಾಂಕು, ಬ್ಯಾಂಕಿಂಗ್ ನಿಯಂತ್ರಣ ಕಾಯಿದೆ, 1949ರ 35ಎ ಪ್ರಕರಣದಡಿ, ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು ಮತ್ತು ಸ್ಥಳೀಯ ಪ್ರದೇಶ ಬ್ಯಾಂಕುಗಳೂ ಸೇರಿದಂತೆ ಎಲ್ಲಾ ವಾಣಿಜ್ಯ ಬ್ಯಾಂಕುಗಳಿಗೆ, ನೋಟು ಪ್ಯಾಕೆಟುಗಳಿಗೆ ಪಿನ್ನುಗಳನ್ನು ಹಾಕದೆ, ಅವುಗಳನ್ನು ಕಾಗದ ಪಟ್ಟಿಗಳಲ್ಲಿ ಭದ್ರಪಡಿಸುವಂತೆ ಸೂಚನೆ ನೀಡಿ, ಕಳೆದ ವರ್ಷ ನಿರ್ದೇಶನವನ್ನು ಹೊರಡಿಸಿತ್ತು. ಅದು, ಸಾರ್ವಜನಿಕರಿಗೆ ಸರಿಯಾದ ಸ್ವಚ್ಛ ನೋಟುಗಳನ್ನು ಮಾತ್ರ ನೀಡುವಂತೆ ಹಾಗೂ ನೋಟುಗಳ ಮೇಲೆ ಯಾವುದೇ ರೀತಿಯ ಜಲಚಿಹ್ನೆಯ (watermark) ಮೇಲೆ ಬರೆಯುವುದನ್ನು ನಿಲ್ಲಿಸುವಂತೆ ತಿಳಿಸಿದೆ. ಆದಾಗ್ಯೂ, ಪೌರ ಸಹಕಾರಿ ಬ್ಯಾಂಕ್‌ಗಳು, ರಾಜ್ಯ ಸಹಕಾರಿ ಬ್ಯಾಂಕ್‌ಗಳು, ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್‌ಗಳು ಸೇರಿದಂತೆ ಕೆಲವೊಂದು ಬ್ಯಾಂಕ್‌ಗಳು / ಬ್ಯಾಂಕ್ ಶಾಖೆಗಳು, ಪಿನ್ನುಗಳನ್ನು ಹಾಕಿದ ಸ್ಥಿತಿಯಲ್ಲಿ ನೊಟುಗಳನ್ನು ಸ್ವೀಕರಿಸುವುದನ್ನು ಅಥವಾ ನೀಡುವುದನ್ನು ಮುಂದುವರಿಸಿದೆ ಎಂದು ಸಾರ್ವಜನಿಕರಿಂದ ದೂರುಗಳನ್ನು ಸ್ವೀಕರಿಸಿದೆ. ಪಿನ್ನುಗಳನ್ನು ಹಾಕುವುದರಿಂದ ಕರೆನ್ಸಿ ನೋಟುಗಳು ವಿರೂಪಗೊಳ್ಳುವುದಲ್ಲದೆ, ನೋಟು ಪ್ಯಾಕೇಟುಗಳಲ್ಲಿನ ಪಿನ್ನುಗಳನ್ನು ತೆಗೆಯಲು ಗ್ರಾಹಕರಿಗೆ ತೊಂದರೆಯಾಗುವುದರ ಜೊತೆಗೆ, ಈ ನೋಟುಗಳ ಆಯಸ್ಸನ್ನೂ ಕಡಿಮೆ ಮಾಡುತ್ತದೆ.

ಅಲ್ಪನಾ ಕಿಲ್ಲಾವಾಲಾ
ಮುಖ್ಯ ಪ್ರಧಾನ ವ್ಯವಸ್ಥಾಪಕರು

ಪತ್ರಿಕಾ ಪ್ರಕಟಣೆ ಸಂ.: 2003–2004/841